**<u>ಸಾಕ್ಷಿಯನ್ನು ದಿಃ 15.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 2(ಎ) ಯಿಂದ (ಜಿ) ಮತ್ತು 4 ನೇ ಪ್ರತಿವಾದಿ ಶ್ರೀ ಬಿ.ಎಸ್.ವೈ ವಕೀಲರಿಂದಃ-</u>**

ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಂದೆ ಹೆಸರು ಬರೆಸಿದ್ದೇನೊ ಅಥವಾ ಗಂಡನ ಹೆಸರು ಬರೆಸಿದ್ದೇನೊ ಎಂದು ನನಗೆ ನೆನಪಿಲ್ಲ. ನನ್ನ ರೇಶನ್ ಕಾರ್ಡ, ಆಧಾರ್ ಕಾರ್ಡ್ ಗಳಲ್ಲಿ ನನ್ನ ಗಂಡನ ಹೆಸರು ಬರೆಸಿರುತ್ತೇನೆ. ಗಂಡನ ಹೆಸರು ಶಂಕರೇಗೌಡ. ಯಾಲಕ್ಕಿಗೌಡ ಎಂದರೆ ನನ್ನ ಗಂಡ ಅಲ್ಲ. ನಮ್ಮ ಕುಟುಂಬದ ರೇಶನ್ ಕಾರ್ಡ್ ಮತದಾರರ ಗುರುತಿನಲ್ಲಿ ಗಂಡನ ಹೆಸರು ಯಾಲಕ್ಕಿಗೌಡ ಎಂದು ಇದೆ. ಈ ದಾವೆಯಲ್ಲಿ ನನ್ನ ಗಂಡನ ಹೆಸರು ಶಂಕರೇಗೌಡ ಎಂದು ಬರೆಸಿರುತ್ತೇನೆ. ಈ ದಾವೆಯಲ್ಲಿ ಗಂಡನ ಹೆಸರು ಶಂಕರೇಗೌಡ ಎಂದು ಬರೆಸಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವೆಯನ್ನು ಯಾವ ಯಾವ ಸರ್ವೆ ನಂ.ಗಳ ಮೇಲೆ ಹಾಕಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ದಾವೆಯನ್ನು ನಮ್ಮ ಮಗ ಹಾಕಿದ್ದು, ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಮಗನ ಹೆಸರು ನಾಗರಾಜು. ನನಗೆ ಮಕ್ಕಳಿಲ್ಲ. ನನಗೆ ಮಕ್ಕಳಿಲ್ಲದಿದ್ದರೂ ನಾಗರಾಜು ನನ್ನ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತನನ್ನು ನಾನು ಸಾಕಿಕೊಂಡಿದ್ದೆ. ನಾಗರಾಜು ನನ್ನ ಸಾಕು ಮಗ ಎಂದು ತೋರಿಸಲು ಯಾವುದೆ ದಾಖಲೆ ಇಲ್ಲ, ಆತನ ನನ್ನ ಅಕ್ಕನ ಮಗ.

ತಂದೆ ಮನೆಗೆ ಯಾವ ಯಾವ ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಮೂಕನಹಳ್ಳಿ ಸರ್ವೆ ನಂ. 99/1 ನಮ್ಮ ತಂದೆ ಮನೆ ಆಸ್ತಿ ಎಂದರೆ ಸರಿ. ಸದರಿ ಸರ್ವೆ ನಂ. ಅನ್ನು ಈ ದಾವೆಯಲ್ಲಿ ಸೇರಿಸಿಲ್ಲ, ಅದು ಬೇರೆ ಆಸ್ತಿ ಆಗಿದೆ. ಸದರಿ ಸರ್ವೆ ನಂಬರ್ ಅನ್ನು ದಾವೆಯಲ್ಲಿ ಸೇರಿಸದೆ ಇರುವ

ಕಾರಣ ನಾನು ಈ ದಾವೆಯಲ್ಲಿ ಕೇಳಿದಂತೆ ಪರಿಹಾರ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 99/1 ರ ಜಮೀನನ್ನು ಈಗಾಗಲೆ ಮಾರಾಟ ಮಾಡಲಾಗಿದೆ ಅದನ್ನು ರಮೇಶ್ ಮತ್ತು ಯೊಗೇಶ್ ಎಂಬುವವರಿಗೆ ಮಾರಾಟ ಮಾಡಲಾಗಿದೆ. ಸದರಿ ಯೊಗೇಶ್ ಎಂಬುವವರು ನನ್ನ ಕೇಸು ನಡೆಸುತ್ತಿದ್ದ ವಕೀಲರು ಎಂದರೆ ಅವರು ಮೊದಲು ನಡೆಸುತ್ತಿದ್ದರು ಈಗ ನಡೆಸುತ್ತಿಲ್ಲ ಎನ್ನುತ್ತಾರೆ. ಸದರಿ ಜಮೀನನ್ನು 1 ಕೋಟಿ ರೂ. ಕೊಟ್ಟಿರುತ್ತೇವೆ. ಆ ಬಗ್ಗೆ ಬರವಣಿಗೆಯಲ್ಲಿ ಬರೆಸಲಾಗಿದೆ. 1 ಕೋಟಿ ರೂ. ಹಣ ನನ್ನ ಬಳಿಯೆ ಇರುತ್ತದೆ. ಅದನ್ನು ವಿಜಯಾ ಬ್ಯಾಂಕ್ ನಲ್ಲಿ ಇರಿಸಲಾಗಿದೆ.

ಸರ್ವೆ ನಂ. 99/1 ನಲ್ಲಿ 3 ಎಕರೆ, 8 ಗುಂಟೆ ಇದ್ದು, ಎಲ್ಲವನ್ನು ಮಾರಾಟ ಮಾಡಲಾಗಿದೆ. ದಿಃ 22.10.2024 ರಂದು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವ ಸಮಯಕ್ಕೂ ಮೊದಲು ಸದರಿ ಜಮೀನನ್ನು ಮಾರಾಟ ಮಾಡಲಾಗಿತ್ತು. ಆ ದಿನ ಸಾಕ್ಷಿ ಹೇಳುವಾಗ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದೇನೆ ಎಂದು ನುಡಿದಿದ್ದೆ ಎಂದರೆ ಸರಿ. ಮುಂದಿನ ತಿಂಗಳು ಮಾರಾಟ ಮಾಡುವುದಾಗಿ ಆ ದಿನ ಹೇಳಿದ್ದೆ ಎಂದರೆ ಸರಿ. ಸಾಕ್ಷಿ ನುಡಿಯುವ ವೇಳೆಯಲ್ಲಿ ಮಾರಾಟ ಆಗಿದ್ದರೂ ಸಹ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಹಾಗೆ ಮಾರಾಟ ಮಾಡಿದಂತಹ ಸ್ವತ್ತು ನಮ್ಮ ಕುಟುಂಬದ ಸ್ವತ್ತು ಆಗಿತ್ತು ಎಂದರೆ ಸರಿಯಲ್ಲ, ನಾನು ಸ್ವತಃ ಖರೀದಿಸಿದ ಸ್ವತ್ತು ಎನ್ನುತ್ತಾರೆ. ಸ್ವತಃ ಖರೀದಿ ಮಾಡಿದ್ದೇನೆ ಎಂದು ತೋರಿಸಲು ದಾಖಲೆ ಇಲ್ಲ. ಹಾಗೆ ಸ್ವತ್ತನ್ನು ಖರೀದಿ ಮಾಡಿದ್ದಲ್ಲಿ ದಾಖಲೆ ಕೊಡುತ್ತಿದ್ದೆ , ಖರೀದಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಯಾರ ಯಾರ ಮೇಲೆ ಹಾಕಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ನಮ್ಮ ಒಟ್ಟು ಕುಟುಂಬದಲ್ಲಿ ಎಲ್ಲರು ಹೆಸರು ಆಗುತ್ತದೆಯೆ ಎಂದರೆ ಸಾಕ್ಷಿ ನಮ್ಮ ತಂದೆಗೆ ನಾವು 5 ಜನ ಮಕ್ಕಳು ಎನ್ನುತ್ತಾರೆ. ತೀರಿ ಹೋದ ಕುಟುಂಬದ ಮಕ್ಕಳ ಹೆಸರು

ಹೇಳಲು ಆಗುವುದಿಲ್ಲ. 1 ನೇ ಪ್ರತಿವಾದಿ ನನ್ನ ಸಣ್ಣಚಿಕ್ಕಮ್ಮ ಅಕ್ಕ. ಅವರು ತೀರಿಕೊಂಡಿದ್ದು, ಅವರ ವಾರಸುದಾರರು ಎಂದರೆ ಗೌರಮ್ಮ, ಪಾರ್ವತಮ್ಮ , ರತ್ನಮ್ಮ, ಶಿವಮ್ಮ ಮತ್ತು ಮಾದಮ್ಮ , ಒಬ್ಬನೆ ಮಗ ಇದ್ದಾರೆ. ಗೌರಮ್ಮನ ಮಗ ನಾಗರಾಜು, ಪುರುಶೋತ್ತಮ ಎಂದರೆ ನಾಗರಾಜು ರವರು ಮಗ. ಅಕ್ಕ ತೀರಿಕೊಂಡ ನಂತರ ನಾಗರಾಜು ರವರನ್ನು ಪಕ್ಷಗಾರರನ್ನಾಗಿ ಮಾಡಲಾಗಿತ್ತು. ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲದಿದ್ದರೂ, ಸತ್ಯವನ್ನು ಮರೆಮಾಚಿ,ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ವಿಚಾರವಾಗಿ ನನಗೆ ಏನೂ ಗೊತ್ತಿರದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಟುಂಬದ ಇತರೆ ಸದಸ್ಯರಿಗೆ ಮೋಸ ಮಾಡುವ ಉದ್ದೇಶದಿಂದ ಸರ್ವೆ ನಂ. 99/1 ರ ಸ್ವತ್ತನ್ನು ಮಾರಾಟ ಮಾಡಿ ಈ ಕೇಸನ್ನು ಸುಳ್ಳಾಗಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ಮಾರಾಟ ಮಾಡಿದ ಕಾರಣ ದಾವಾ ಸ್ವತ್ತಿನ ಮೇಲೆ ಕೇಳಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ. ವಿಜಯ ಬ್ಯಾಂಕ್ ನಲ್ಲಿ ಇಟ್ಟ 1 ಕೋಟಿ ರೂ. ಹಣದ ಸಂಬಂಧ ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸುತ್ತಿರಾ ಎಂದರೆ ಸಾಕ್ಷಿ ಅದರಲ್ಲಿ 70 ಸಾವಿರ ರೂ ಈಗಾಗಲೆ ಬಳಸಿಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ 70 ಲಕ್ಷ ಹಣ ಬಳಸಿಕೊಳ್ಳಲಾಗಿದೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.